**<u>ದಿನಾಂಕ: 29.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು : ವಾದಿ ಪರ ಶ್ರೀ. ಎಫ್ ಬಿ ಎಂ ವಕೀಲರಿಂದ</u>

ನಾನು ಖಾಯಂ ಆಗಿ ಬೆಳಗಾಲಪೇರೆ ಗ್ರಾಮದಲ್ಲಿ ವಾಸವಾಗಿದ್ದೇನೆ. ಮೂಲ ಪುರುಷ ಅಂದರೆ 1 ನೇ ಪ್ರತಿವಾದಿ ಶಿವಪುತ್ರಪ್ಪ ಆತನ ಜೀವಿತ ಕಾಲಕ್ಕೆ ಆತ ತನ್ನ ಮಕ್ಕಳೊಂದಿಗೆ ಬೆಳಗಾಲಪೇಟೆಯಲ್ಲಿ ವಾಸವಾಗಿದ್ದರು ಎಂದರೆ ಸರಿ . ಸದರಿ ಶಿವಪುತ್ರಪ್ಪ ರವರ ಹೆಂಡತಿಯ ಹೆಸರು ಶಕುಂತಲಾ ಎಂದರೆ ನನಗೆ ಗೊತ್ತಿಲ್ಲ. ಸದರಿ ಶಿವಪುತ್ರಪ್ಪನ ಮಕ್ಕಳು 1. ಜಯಲಿಂಗಪ್ಪ 2. ಚಂದ್ರಶೇಖರ, 3. ಶೋಭಾ, 4. ಪ್ರಭುಲಿಂಗಪ್ಪ ಮತ್ತು 5. ಅಶೋಕ ಎಂದರೆ ಸರಿ. ಸದರಿ ಮೇಲೆ ಹೇಳಿದ ಜಯಲಿಂಗಪ್ಪ ತೀರಿಕೊಂಡಿದ್ದು 3 ರಿಂದ 5 ನೇ ಪ್ರತಿವಾದಿಗಳು ಆತನ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. ಮೂಲ ಪುರುಷ ಶಿವಪುತರಪ್ಪ ತಿರಿಕೊಂಡು 2-3 ವರ್ಷಗಳು ಆಗಿರಬಹುದು.

2. ಸದರಿ ಮೂಲಪುರುಷ ಶಿವಪುತ್ರಪ್ಪ ರವರಿಗೆ 3 ಜನ ಅಣ್ಣ ತಮ್ಮಂದಿರು . ಅವರೆಂದರೆ 1. ಪಂಚಾಕ್ಷರಪ್ಪ 2. ಪ್ರೇಮಾನಂದಪ್ಪ ಮತ್ತು 3. ದಯಾನಂದಪ್ಪ. ಸದರಿ ಶಿವಪುತ್ರಪ್ಪ ರವರಿಗೆ ಆತನ ತಂದೆಯಿಂದ ಯಾವೆಲ್ಲ ಆಸ್ತಿಗಳು ಬಂದಿದ್ದವು ಎಂದು ನಾನು ತಿಳಿದುಕೊಂಡಿಲ್ಲ. ಸದರಿ ಶಿವಪುತ್ರಪ್ಪ ರವರಗೆ ಆತನ ತಂದೆಯಿಂದ ಸರ್ವೆ ನಂಬರ 208 ಕ್ಷೇತ್ರ 05 ಎಕರೆ 04 ಗುಂಟೆ ಹಾಗೂ ಸರ್ವೆ ನಂಬರ 216/1 ಕ್ಷೇತ್ರ 3 ಎಕರೆ 24 ಗುಂಟೆ ಬೆಳಗಾಲಪೇಟೆಯ ಜಮೀನುಗಳು ಬಂದಿದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ಶಿವಪುತ್ರಪ್ಪ ಮೂಲತಃ

ಒಕ್ಕಲುತನ ಮಾಡುತ್ತಿದ್ದರಾ ಎಂದರೆ ಸಾಕ್ಷಿ ಜಮೀನು ಅವರಿಗೆ ಇರಬಹುದು ನನಗೆ ಗೊತ್ತಿಲ್ಲ ಎನ್ನುತ್ತಾರೆ ಸಾಕ್ಷಿ ಮುಂದುವರೆದು ಅವರು ವ್ಯಾಪಾರ ಮಾಡುತ್ತಿದ್ದರು ಎನ್ನುತ್ತಾರೆ.

3. ಸದರಿ ಶಿವಪುತ್ರಪ್ಪ ರವರು ಸರ್ವೆ ನಂಬರ 208 ಮತ್ತು 216/1 ಜಮೀನುಗಳಿಂದ ಬಂದ ಉತ್ಪನ್ನದಿಂದ ಸರ್ವೆ ನಂಬರ 201/6 ಕ್ಷೇತ್ರ 02 ಎಕರೆ 02 ಗುಂಟೆ ಜಮೀನನ್ನು ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಶೆಡ್ಯೂಲ್ 2 ಪಂಚಾಯತಿ ಆಸ್ತಿಯ ಮೂಲ ಸಂಖ್ಯೆ ವಿ ಪಿ ಸಿ ನಂಬರ 1 ಎಂದು ಇತ್ತು . ಸದರಿ ವಿ ಪಿ ಸಿ ನಂಬರ 1 ರಲ್ಲಿ ಈಗ 5 ಭಾಗಗಳಾಗಿವೆ. ಸದರಿ ಶಿವಪುತ್ರಪ್ಪ ಹಾಗೂ ಆತನ ಮೂರು ಜನ ಸಹೋದರರು ಸೇರಿ ಸದರಿ ವಿ ಪಿ ಸಿ ನಂಬರ 1 ನ್ನು ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿ ಪಿ ಸಿ ನಂಬರ 1 ಆಸ್ತಿಯಲ್ಲಿ ಶಿವಪುತ್ರಪ್ಪ ಹಾಗೂ ಆತನ ಮೂರು ಜನ ಸಹೋದರರು 1960 ರ ಈಚೆಗೆ ಮಿಲ್ ನ್ನು ಸ್ಥಾಪಿಸಿದ್ದರು.

4. ಶಿವಪುತ್ರಪ್ಪ ಹಾಗೂ ಆತನ ಮಕ್ಕಳ ಒಟ್ಟು ಕುಟುಂಬದ ಮ್ಯಾನೇಜರಿಕೆಯನ್ನು ಶಿವಪುತ್ರಪ್ಪ ರವರೇ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ ಶಿವಪುತ್ರಪ್ಪ ರವರಿಗೆ ವಯಸ್ಸಾದ ನಂತರ ಅವರ ಮೊದಲನೇ ಮಗನಾದ ಜಯಲಿಂಗಪ್ಪ ಮನೆಯ ಹಿರಿತನವನ್ನು ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಶಿವಪುತ್ರಪ್ಪ ಮತ್ತು ಅವರ ಮಗ ಜಯಲಿಂಗಪ್ಪ ಅವರ ಒಟ್ಟು ಕುಟುಂಬದ ಜಮೀನುಗಳ ಆದಾಯದಿಂದ ಸದರಿ ವಿ ಪಿ ಸಿ ನಂಬರ 1 ರಲ್ಲಿರುವ ಶಿವಪುತ್ರಪ್ಪ ರವರ ಸಹೋದರರಾದ ಪಂಚಾಕ್ಷರಪ್ಪ ಪ್ರೇಮಾನಂದಪ್ಪ ಮತ್ತು ದಯಾನಂದಪ್ಪರವರ ಹಿಸ್ಸೆಯನ್ನು ಖರೀದಿಸಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿಯನ್ನು ಶಿವಪುತ್ರಪ್ಪ ಮತ್ತು ಜಯಲಿಂಗಪ್ಪ ಯಾವಾಗ ಮತ್ತು ಎಷ್ಟು ಮೊತ್ತಕ್ಕೆ ಮಾಡಿದರು ಎಂದು ನನಗೆ ಗೊತ್ತಿಲ್ಲ.

5. ಸದರಿ ಶಿವಪುತ್ರಪ್ಪ ಮತ್ತು ಜಯಲಿಂಗಪ್ಪ ವಿ ಪಿ ಸಿ ನಂಬರ 1 ರಲ್ಲಿದ್ದ ಮಿಲ್ ನ್ನು ನಡೆಸುತ್ತಿದ್ದರು ಎಂದರೆ ಸರಿ. ಸದರಿ ಮಿಲ್ ನಿಂದ ಬಂದ ಆದಾಯವನ್ನು ಶಿವಪುತ್ರಪ್ಪ ಮತ್ತು ಆತನ ಎಲ್ಲ ಮಕ್ಕಳು ಅನುಭವಿಸುತ್ತಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ವಿ ಪಿ ಸಿ ನಂಬರ 1 ನ್ನು ನಾನು ಖರೀದಿಸಿರುತ್ತೇನೆ ಎಂದು ಹೇಳುವ ಸಮಯದಲ್ಲಿ ಸದರಿ ಆಸ್ತಿಯನ್ನು ಶಿವಪುತ್ರಪ್ಪ ಮತ್ತು ಜಯಲಿಂಗಪ್ಪ ಯಾವ ಅದಾಯದಿಂದ ಖರೀದಿಸಿರುತ್ತಾರೆ ಎಂದು ದಾಖಲೆಗಳನ್ನು ಪರಿಶೀಲಿಸಿರುತ್ತೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ದಾಖಲೆಗಳನ್ನು ಪರಿಶೀಲಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅದು ನಮಗೆ ಸಂಬಂಧಪಡದ ವಿಷಯವಲ್ಲದ್ದರಿಂದ ನಾನು ಪರಿಶೀಲಿಸಿಲ್ಲ ಎನ್ನುತ್ತಾರೆ.

6. ಸದರಿ ವಿ ಪಿ ಸಿ ನಂಬರ 1 ನ್ನು ಖರೀದಿಸಿದ್ದೇನೆ ಎನ್ನುವ ಕಾಲಕ್ಕೆ ಸದರಿ ಶಿವಪುತ್ರಪ್ಪ ರವರಿಗೆ ಎಷ್ಟು ಜನ ಮಕ್ಕಳು ಎಂದು ಕೇಳಿ ತಿಳಿದುಕೊಂಡಿರುತ್ತೇನೆ. ಸದರಿ ಸಮಯಲ್ಲಿ ವಾದಿ ಶೋಭಾ ರವರು ಶಿವಪುತ್ರಪ್ಪ ರವರ ಮಗಳು ಎಂದು ನನಗೆ ಗೊತ್ತಿತ್ತು ಎಂದರೆ ಸರಿ. ಸದರಿ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ವಿ ಪಿ ಸಿ ನಂಬರ 1 ರ ಉತಾರ ಮಾತ್ರ ನನಗೆ ತೋರಿಸಿದ್ದರು. ಸದರಿ ಸಮಯದಲ್ಲಿ ಸದರಿ ಆಸ್ತಿ ಪ್ರಭುಲಿಂಗಪ್ಪ ಮತ್ತು ಅಶೋಕ ಅಂದರೆ 6 ಮತ್ತು 7 ನೇ ಪ್ರತಿವಾದಿಯರ ಹೆಸರಿನಲ್ಲಿತ್ತು. ಸದರಿ ಆಸ್ತಿಯನ್ನು 6 ಮತ್ತು 7 ನೇ ಪ್ರತಿವಾದಿಯರಿಗೆ ಆತನ ಅಣ್ಣ ತಮ್ಮಂದಿರು ಬಿಟ್ಟು ಕೊಟ್ಟ ಬಗ್ಗೆ ಪಂಚಾಯತಿ ದಾಖಲೆಯನ್ನು ಸದರಿಯವರು ನನಗೆ ತೋರಿಸಿದ್ದರು. ಸದರಿ 6 ಮತ್ತು 7 ನೇ ಪ್ರತಿವಾದಿಯರ ಪರ ಹಕ್ಕು ಬಿಟ್ಟು ಕೊಟ್ಟ ದಾಖಲೆ ನೋಂದಣಿ ಆಗಿತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ 6 ಮತ್ತು 7 ನೇ ಪ್ರತಿವಾದಿಯರ ಹಕ್ಕು ಬಿಟ್ಟು ಕೊಟ್ಟ ದಾಖಲೆ ಕಾನೂನಿನ ಅಡಿಯಲ್ಲಿ ಊರ್ಜಿತವಾಗಿದೆಯೋ ಇಲ್ಲವೋ ಎಂದು ನೋಡಿದ್ದೀರಾ ಎಂದರೆ ಸಾಕ್ಷಿ ನಾನು ಸದರಿ ಪಂಚಾಯತಿ ದಾಖಲೆಯನ್ನು ಮಾತ್ರ ನೋಡಿದ್ದೇನೆ ಎನ್ನುತ್ತಾರೆ . ಸದರಿ ಪಂಚಾಯತಿ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಸದರಿ ಪಂಚಾಯತಿ ದಾಖಲೆಯನ್ನು ಹಾಜರು ಪಡಿಸದೇ ಇದ್ದರೂ ಹಾಜರು ಪಡಿಸಿರುತ್ತೇನೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚಾಯತಿ ದಾಖಲೆ ಇದ್ದರೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಸದರಿ ಪಂಚಾಯತಿ ದಾಖಲೆ ಬಾಂಡ್ ಪೇಪರ ಮೇಲೆ ಇರಲಿಲ್ಲ ಖಾಲಿ ಹಾಳೆ ಮೇಲೆ ಇತ್ತು. ಸದರಿ ದಾಖಲೆಯ ಮೇಲೆ ಉಪನೋಂದಣಾಧಿಕಾರಿಯ ಶೀಲು ವಗೈರ ಇರಲಿಲ್ಲ. ಸದರಿ ಅಸ್ತಿಗೆಗೆ ಸಂಬಂಧಿಸಿದಂತೆ ಶಿವಪುತ್ರಪ್ಪ ರವರು ಕಬೂಲಿ ವರದಿ ನೀಡಿದ ಬಗ್ಗೆ ಅಥವಾ ಪಂಚಾಯತಿಯವರು ಆತನಿಗೆ ಸದರಿ ಆಸ್ತಿಗೆ ಸಂಬಂಧಿಸಿದಂತೆ ನೋಟಿಸು ನೀಡಿದ ಬಗ್ಗೆ ನಾನು ದಾಖಲೆಯನು ನೋಡಿಲ್ಲ.

7. ಸದರಿ ಶಿವಪುತ್ರಪ್ಪ ಹಾಗೂ ಆತನ ಮಗ ಜಯಲಿಂಗಪ್ಪ ವಿ ಪಿ ಸಿ ನಂಬರ 1 ಆಸ್ತಿಗೆ ಸಂಬಂಧಿಸಿದಂತೆ 6 ಮತ್ತು 7 ನೇ ಪ್ರತಿವಾದಿಯರ ಹೆಸರಿಗೆ ಯಾವುದೇ ನೋಂದಾಯಿತ ಹಕ್ಕು ಬಿಟ್ಟು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿ ನನಗೆ ಸದರಿ ಆಸ್ತಿಯ ಉತಾರ ಮಾತ್ರ ತೋರಿಸಿದ್ದರು ಎನ್ನುತ್ತಾರೆ. 6 ಮತ್ತು 7 ನೇ ಪ್ರತಿವಾದಿಯರು ವಾದಿಗೆ ಹಾಗೂ ಇನ್ನೂಳಿದ ಅವರ ಸಹೋದರರರರಿಗೆ ಗೊತ್ತಿಲ್ಲದ ಹಾಗೆ ಪಂಚಾಯತಿ ಅಧಿಕಾರಿಗಳನ್ನು ಮೀಲಾಪೆ ಮಾಡಿಕೊಂಡು ಸದರಿ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ತಮ್ಮ ಹೆಸರಿಗೆ ಖೊಟ್ಟಿ ಖಾತೆ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಾನು ಖರೀದಿಸಿರುತ್ತೇನೆ ಎಂದು ಹೇಳುವ ವಿ ಪಿ ಸಿ ನಂಬರ 1 ರ ಖರೀದಿಯ ಪ್ರತಿಫಲವನ್ನು ಸದರಿ ಶಿವಪುತ್ರಪ್ಪ ಮತ್ತು ಆತನ

ಮಕ್ಕಳ ಒಟ್ಟು ಕುಟುಂಬದ ಘರಾಣೆಗೆ ಬಳಸಿಕೊಂಡಿತ್ತಾರೋ ಹೇಗೆ ಎಂಬ ಪ್ರಶ್ನೆಗೆ ಎಂಬ ಸಾಕ್ಷಿ ಸದರಿ ಪ್ರಫಲದ ಹಣವನ್ನು ಕೆ ಎಸ್ ಎಫ್ ಸಿ ಯಲ್ಲಿ ಸದರಿ ಆಸ್ತಿಯ ಮೇಲೆ ಇದ್ದ ಸಾಲ ತುಂಬಲು ಬಳಸಿಕೊಂಡಿರುತ್ತಾರೆ ಎನ್ನುತ್ತಾರೆ.

8. ಸದರಿ ಸಾಲ ಬಿಟ್ಟು ಶಿವಪುತ್ರಪ್ಪ ವರವರ ಘರಾಣೆಗೆ ಬೇರೆ ಯಾವ ಅಡಚಣೆ ಇತ್ತು ಎಂದು ನನಗೆ ಗೊತ್ತಿಲ್ಲ ಹಾಗೂ ಅದರ ಬಗ್ಗೆ ನಾನು ವಿಚಾರಣೆ ಮಾಡಿಲ್ಲ. ಸದರಿ ಆಸ್ತಿದಯ ಮೇಲೆ 4 ಲಕ್ಷ ರೂಪಾಯಿ ಸಾಲ ಇತ್ತು ಅದನ್ನು ನಾನು ಡಿ ಡಿ ಮುಖಾಂತರ ಭರಿಸಿರುತ್ತೇನೆ. ಸದರಿ ನಾನು ಖರೀದಿಸಿರುತ್ತೇನೆ ಎಂದು ಹೇಳುವ ವಿ ಪಿ ಸಿ ನಂಬರ 1 ರಲ್ಲಿ ಇದ್ದ ಮಿಲ್ ನ ಕಿಮ್ಮತ್ತು 50 ಲಕ್ಷಕ್ಕಿಂತ ಹೆಚ್ಚು ಇತ್ತು ಎಂದರೆ ಸರಿಯಲ್ಲ. ಸದರಿ ವಿ ಪಿ ಸಿ ನಂಬರ 1 ರಲ್ಲಿ ವಾದಿಗೂ ಸಹ ಹಿಸ್ಸೆ ಇದೆ ಎಂದು ನನಗೆ ತಿಳಿಸಿದ್ದರೂ ಸಹ ಸದರಿ 50 ಲಕ್ಷ ಕಿಮ್ಮತ್ತಿನ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ 6 ಮತ್ತು 7 ನೇ ಪ್ರತಿವಾದಿಯರೊಂದಿಗೆ ಮೀಲಾಪೆಯಾಗಿ ಸದರಿ ಖರೀದಿ ಪತ್ರ ವನ್ನು ಖೊಟ್ಟಿ ಸೃಷಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ

9. ಸದರಿ ಕಾನೂನು ಖರೀದಿ ಪತ್ರ ವಾದಿಗೆ ಬಂಧನಕಾರಕವಾಗುದಿಲ್ಲ ಹಾಗೂ ಸದರಿ ಖರೀದಿ ಪತ್ರದ ಮೂಲಕ ನನಗೆ ಯಾವುದೇ ಹಕ್ಕು ಫ್ರಾಪ್ತವಾಗಿಲ್ಲ ಎಂದರೆ ಸರಿಯಲ್ಲ ಸದರಿ ವಿ ಪಿ ಸಿ ನಂಬರ 1 ವಾದಿ ಹಾಗೂ ಅವರ ಅಣ್ಣ ತಮ್ಮಂದಿರ ಸ್ವಾಧೀನದಲ್ಲಿ ಇವತ್ತಿಗೂ ಸಹ ಇದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನನ್ನ ಕಬ್ಜೆಯಲ್ಲಿ ಇದೆ ಎನ್ನುತ್ತಾರೆ. ಸದರಿ ವಿ ಪಿ ಸಿ ನಂಬರ 1 ನ್ನು ಖರೀದಿಸುವ ಕಾಲಕ್ಕೆ ವಾದಿಯನ್ನಾಗಲಿ ಅಥವಾ 2 ನೇ ಪ್ರತಿವಾದಿಯನ್ನಾಗಲಿ ಸದರಿ ಆಸ್ತಿಯಲ್ಲಿ ಅವರಿಗೆ ಏನಾದರೂ ಹಕ್ಕು ಹಿತಾಸಕ್ತಿ ಇದೆಯಾ ಎಂದು ಅವರಾನ್ನು ನಾನು ವಿಚಾರಣೆ ಮಾಡಿಲ್ಲ. ಸದರಿ ಖರೀದಿಯ ಕಾಲಕ್ಕೆ ವಾದಿಯ ಒಪ್ಪಿಗೆಯನ್ನು ನಾನು ಪಡೆದಿಲ್ಲ ಸಾಕ್ಷಿ ಮುಂದುವರೆದು ಅವರ ತಂದೆಯ ಒಪ್ಪಿಗೆಯನ್ನು ಪಡೆದಿರುತ್ತೇನೆ ಎನ್ನುತ್ತಾರೆ.

10. ಅಸಕಲು ದಾವಾ ಸಂಖ್ಯೆ 19/2013 ರಲ್ಲಿ ನನ್ನ ಅಣ್ಣ ಭಾಗಿಯಾಗಿದ್ದರು. ಸದರಿ ದಾವೆಯಲಲ್ ನನ್ನನ್ನು ಸಹ 8 ನೇ ಪ್ರತಿವಾದಿಯ್ನುನ್ನಾಗಿ ಮಾಡಲಾಗಿತ್ತು ಎಂದರೆ ಸರಿ. ಸದರಿ ದಾವೆಯನ್ನು ಈ ದಾವೆಯ 2 ನೇ ಪ್ರತಿವಾದಿ ನಡೆಸುತ್ತಿದ್ದಾನೋ ಇಲ್ಲವೋ ಎಂದು ತಿಳಿದು ಕೊಂಡಿದ್ದೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಸದರಿ ಈ ದಾವೆಯ 2 ನೇ ಪ್ರತಿವಾದಿ ಚಂದ್ರಶೇಖರ ರವರ ಮೇಲೆ ಆರ್ಥಿಕ ಪ್ರಭಾವ ಬೀರಿ ಸದರಿ ದಾವೆಯನ್ನು ಮುನ್ನಡೆಸದಂತೆ ನಾವು ನೋಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

11. ಶಿವಪುತ್ರಪ್ಪ ಹಾಗೂ ಅವರ ಮಕ್ಕಳ ಮಧ್ಯ ಯರಾವ ದಿನಾಂಕ ತಿಂಗಳು, ಇಸ್ವಿಯಂದು ಪಾಲು ವಿಭಾಗ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ನಾನು ಭಾಗವಹಿಸಿರಲಿಲ್ಲ. ಸದರಿ ವಿ ಪಿ ಸಿ ನಂಬರ 1 ನ್ನು ನಾವು ಖರೀದಿಸುವ ಕಾಲಕ್ಕೆ ಸದರಿ ಪಾಲು

ವಿಭಾಗ ಪತ್ರವನ್ನೆನ್ನಾದರೂ ನೋಡಿದ್ದೀರಾ ಎಂದರೆ ಸಾಕ್ಷಿ ಪಂಚಾಯತಿ ದಾಖಲೆಯನ್ನು ಮಾತ್ರ ನೋಡಿದ್ದೆ ಪಾಲು ವಿಭಾಗ ಪತ್ರ ನೋಡಿರಲಿಲ್ಲ ಎನ್ನುತ್ತಾರೆ. ಶಿವಪುತ್ರಪ್ಪ ಹಾಗೂ ಆತನ ಮಕ್ಕಳ ಮಧ್ಯ ಆತನ ಏಕತ್ರ ಘರಾಣೆಯ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವತ್ತು ಹಿಸ್ಸೆ ಆಗಿಲ್ಲ ಎಂದರೆ ಸರಿಯಲ್ಲ. ವಿ ಪಿ ಸಿ ನಂಬರ 1 ಹಾಗೂ ಅದರಲ್ಲಿರುವ ಮಿಲ್ ನ್ನು ಶಿವಪುತ್ರಪ್ಪ ಹಾಗು ಆತನ ಎಲ್ಲಾ ಮಕ್ಕಳ ಒಟ್ಟು ಘರಾಣೆಯ ಆಸ್ತಿ ಆಗಿತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಹಾಗೂ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಕಾಣಿಸಿದ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿವೇ ಎಂದರೆ ಸರಿಯಲ್ಲ. ಸದರಿ ವಿ ಪಿ ಸಿ ನಂಬರ 1 ಹಾಗೂ ಅದರಲ್ಲಿರುವ ಮಿಲ್ ನಲ್ಲಿ ಹಾಗೂ ಶಿವಪುತ್ರಪ್ಪ ರವರ ಒಟ್ಟು ಕುಟಜಂಬದ ಆಸ್ತಿಗಳಲ್ಲಿ ವಾದಿಗೆ 1/5 ಹಿಸ್ಸೆ ಇದೆ ಎಂದರೆ ನನಗೆ ಗೊತ್ತಿಲ್ಲ.

**(6 ಮತ್ತು 7 ನೇ ಪ್ರತಿವಾದಿಯರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು. )**

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

**1** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್